**<u>ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜೇವರ್ಗಿ.</u>**

**<u>ಸಿ ಸಿ ನಂ. 1749/2021</u>**

**<u>ಫಿರ್ಯಾದಿದಾರರು :-</u>** ನೆಲೋಗಿ ಪೊಲೀಸ್ ಠಾಣೆ

***: ವಿರುದ್ಧ :***

**<u>ಆರೋಪಿತರು:</u>**

1. ಸುಧಾಕರ ತಂದೆ ಭೀಮರಾಯ ಅಂಬಿಗೇರ
   ವಃ 30 ವರ್ಷ, ಉಃ ಒಕ್ಕಲುತನ

2. ಹಾಜಿಮಲಂಗ ತಂದೆ ಜುಬ್ರೇಲಾ ಕೋರಬಾ
   ವಃ 24 ವರ್ಷ, ಉಃ ಚಾಲಕ

**<u>ದೋಷಾರೋಪಣೆ</u>**

**ಶ್ರೀ ಕಾಶಿನಾಥ ವಿ. ಉಪ್ಪಾರ್, ಬಿ.ಎಸ್.ಸಿ. ಎಲ್ಎಲ್.ಬಿ.,** ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಜೇವರ್ಗಿ, ಆದ ನಾನು, ಆರೋಪಿತರಾದ ನಿಮ್ಮ ವಿರುದ್ದ ಈ ಕೆಳಕಾಣಿಸಿದ ಅಪಾದನೆಗಳನ್ನು ರೂಪಿಸಿರುತ್ತೆನೆ.

ಆರೋಪಿತರಾದ ನೀವು ದಿನಾಂಕ 14-03-2021 ರಂದು ರಾತ್ರಿ 02-00 ಗಂಟೆ ಸಮಯದಲ್ಲಿ ನೆಲೋಗಿ ಪೊಲೀಸ ಠಾಣೆ ವ್ಯಾಪ್ತಿಯಲ್ಲಿ ಬರುವ ನೆಲೋಗಿ ಕಮಾನ ಹತ್ತಿರ, ಆರೋಪಿತರು ಟ್ರ್ಯಾಕ್ಟರ ನಂ.ಕೆಎ-32/ಟಿಬಿ-7728 ಟ್ರ್ಯಾಲಿ ನಂ.ಕೆಎ-32/ಟಿಬಿ 8660 ನೆದ್ದರಲ್ಲಿ, ಯಾವುದೇ ಅಧಿಕೃತ ಪರವಾನಿಗೆ ಇಲ್ಲದೆ, ಕಳ್ಳತನ ಮಾಡುವ ಉದ್ದೇಶದಿಂದ ಸದರಿ ಟ್ರ್ಯಾಕ್ಟರ-ಟ್ರ್ಯಾಲಿಯಲ್ಲಿ ಸಾಗಾಣಿಕೆ ಮಾಡಲು ಮರಳನ್ನು ಕಳ್ಳತನದಿಂದ ತುಂಬಿರುತ್ತಿರಿ, ಆದ್ದರಿಂದ ನೀವು ಭಾ. ದಂ. ಸಂ. ಕಲಂ 379 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತಿರಿ, ಅದು ನನ್ನ ಸಂಜ್ಞೆಯ ಅಡಿಯಲ್ಲಿ ಬರುತ್ತದೆ.

ನೀವು ಮೇಲೆ ಹೇಳಿದ ಅಪಾದನೆಗೆ ಈ ನ್ಯಾಯಾಲಯದ ಮುಂದೆ ನೀವು ವಿಚಾರಣೆ ಎದುರಿಸಬೇಕೆಂದು ಆದೇಶಿಸುತ್ತೇನೆ.

ದಿನಾಂಕ 13-03-2026

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.

## ಆರೋಪಿಗಳ ಹೇಳಿಕೆ

ಪ್ರಶ್ನೆ-1: ಈಗ ನಿಮಗೆ ತಿಳಿದ ಭಾಷೆಯಲ್ಲಿ ಓದಿ ಹೇಳಿದ ಆರೋಪಣೆಯನ್ನು ಅರ್ಥಮಾಡಿಕೊಂಡಿದಿರಾ?

ಉ: ಆ-1 ಆ-2

ಪ್ರಶ್ನೆ -2: ಆರೋಪಣೆಯನ್ನು ಒಪ್ಪುವಿರಾ ಅಥವಾ ವಿಚಾರಣೆ ನಡೆಸಬೇಕೆ?

ಉ: ಆ-1 ಆ-2

(ಈ ಮೂಲಕ ದೃಢೀಕರಿಸುವುದೇನೆಂದರೆ ಮೇಲೆ ಕೊಟ್ಟಂತಹ ಹೇಳಿಕೆಗಳು ಆರೋಪಿತರ ನಿಜವಾದ ಹೇಳಿಕೆಗಳಿರುತ್ತವೆಂದು ಪ್ರಮಾಣಿಕರಿಸಲಾಗಿದೆ)

ದಿನಾಂಕ 13-03-2026

ಪ್ರ.ದ.ನ್ಯಾ.ದಂಡಾಧಿಕಾರಿಗಳು,
ಜೇವರ್ಗಿ.